ಕರ್ನಾಟಕ ಪರೀಕ್ಷಾ ಪ್ರಾಧಿಕಾರ
Karnataka Examinations Authority

ಸಂಖ್ಯೆ: ಇಡಿ/ಕೆಇಎ/ಯುಜಿಸಿಇಟಿ-2023 ದಿನಾಂಕ: 20-07-2023

## ಪ್ರಕಟಣೆ

**ಆರ್.ಡಿ. ಸಂಖ್ಯೆ ಪರಿಶೀಲನೆ**

ಅಭ್ಯರ್ಥಿಗಳು ಯುಜಿಸಿಇಟಿ-2023ಕ್ಕೆ ಜಾತಿ ಪ್ರಮಾಣ ಪತ್ರ, ಜಾತಿ ಆದಾಯ ಪ್ರಮಾಣ ಪತ್ರ, ಆದಾಯ ಪ್ರಮಾಣ ಪತ್ರ, ಕಲ್ಯಾಣ ಕರ್ನಾಟಕ 371(ಜೆ) ಪ್ರಮಾಣ ಪತ್ರಗಳ ಪ್ರವರ್ಗಗಳನ್ನು ಆನ್‌ಲೈನ್ ಅರ್ಜಿಯಲ್ಲಿ ನಮೂದಿಸಿರುವ (Category should be claimed in the application) ಹಾಗು ಬಿಇಓ ಕಚೇರಿಯಲ್ಲಿ ವ್ಯಾಸಂಗ ಪ್ರಮಾಣ ಪತ್ರ ಪರಿಶೀಲನೆಯನ್ನು ಪೂರ್ಣಗೊಳಿಸಿ Acknowledgement Slip ಹೊಂದಿದ್ದು, ಆದರೆ ವಿವಿಧ ಕಾರಣಗಳಿಗಾಗಿ ಮೀಸಲಾತಿಗೆ ಆರ್‌ಡಿ ಸಂಖ್ಯೆಯು ಇನ್‌ವ್ಯಾಲಿಡ್ (Invalid) ಆಗಿರುವ ಅಭ್ಯರ್ಥಿಗಳ ಪಟ್ಟಿಯನ್ನು ಪ್ರಾಧಿಕಾರದ ವೆಬ್‌ಸೈಟಿನಲ್ಲಿ ಪ್ರಕಟಿಸಲಾಗಿದೆ.

ಪ್ರಕಟಿಸಿರುವ ಪಟ್ಟಿಯಲ್ಲಿ ಅಭ್ಯರ್ಥಿಗಳ ಹೆಸರು ಇರುವ ಅಭ್ಯರ್ಥಿಗಳು ಮಾತ್ರ ಈ ಕೆಳಗೆ ನೀಡಿರುವ ವೇಳಾಪಟ್ಟಿಯಂತೆ, ಕೆಇಎ, ಮಲ್ಲೇಶ್ವರಂ, ಬೆಂಗಳೂರು ಇಲ್ಲಿ ಎಲ್ಲಾ ಪ್ರಮಾಣ ಪತ್ರಗಳು / ದಾಖಲೆಗಳೊಂದಿಗೆ ಹಾಜರಾಗಬಹುದಾಗಿದೆ.

ಗಮನಿಸಿ:

1. ಬಿಇಓ ಕಚೇರಿಯಲ್ಲಿ ವ್ಯಾಸಂಗ ಪ್ರಮಾಣ ಪತ್ರ ಪರಿಶೀಲನೆಗೆ ಹಾಜರಾಗದೇ ಇರುವ ಅಭ್ಯರ್ಥಿಗಳು ಅರ್ಹತೆ ಪಡೆಯುವುದಿಲ್ಲ, ಆದ್ದರಿಂದ ಅಂತಹ ಅಭ್ಯರ್ಥಿಗಳು ಆರ್‌ಡಿ ಪರಿಶೀಲನೆಗೆ ಹಾಜರಾಗುವ ಅವಶ್ಯಕತೆ ಇರುವುದಿಲ್ಲ.
2. ಅರ್ಜಿಯಲ್ಲಿ ಮೀಸಲಾತಿಯನ್ನು ನಮೂದಿಸದೇ ಇರುವ ಅಭ್ಯರ್ಥಿಗಳು ಮೀಸಲಾತಿ ಪಡೆಯಲು ಅರ್ಹತೆ ಪಡೆಯುವುದಿಲ್ಲ ಆದ್ದರಿಂದ ಅಂತಹ ಅಭ್ಯರ್ಥಿಗಳು ಆರ್‌ಡಿ ಪರಿಶೀಲನೆಗೆ ಹಾಜರಾಗುವ ಅವಶ್ಯಕತೆ ಇರುವುದಿಲ್ಲ.
3. ಮೀಸಲಾತಿ ಕೋರಿರುವ ಎಲ್ಲಾ ಪ್ರಮಾಣ ಪತ್ರಗಳು ಅಭ್ಯರ್ಥಿಯ ಹೆಸರಿನಲ್ಲಿ ಪಡೆದಿರಬೇಕು ಮತ್ತು ಸರ್ಕಾರವು ನಿಗದಿ ಪಡಿಸಿರುವ ನಿಗದಿತ ನಮೂನೆಗಳಲ್ಲಿಯೇ ಇರತಕ್ಕದ್ದು ಹಾಗು ಪ್ರಮಾಣ ಪತ್ರವು ಚಾಲ್ತಿಯಲ್ಲಿರಬೇಕು.
4. Valid ಎಂದು ಅರ್ಜಿ ನಮೂನೆಯಲ್ಲಿ ತೋರಿಸಿರುವ ಅಭ್ಯರ್ಥಿಗಳು ಪರಿಶೀಲನೆಗೆ ಹಾಜರಾಗುವ ಅವಶ್ಯಕತೆ ಇರುವುದಿಲ್ಲ.
5. ಅಭ್ಯರ್ಥಿಗಳು, ಯುಜಿಸಿಇಟಿ-2023ರ ಅರ್ಜಿ ಪ್ರತಿ ಮತ್ತು ಪ್ರವೇಶ ಪತ್ರ, ಬಿಇಓ ಕಚೇರಿಯಲ್ಲಿ ಪಡೆದ Acknowledgement Slip ಮತ್ತು ಕ್ಲೇಮ್ ಮಾಡಿರುವ ಮೀಸಲಾತಿಗೆ ಸಂಬಂಧಿಸಿದ ಪ್ರಮಾಣ ಪತ್ರಗಳನ್ನು ಹಾಗು ಇತರೆ ಎಲ್ಲಾ ದಾಖಲೆಗಳನ್ನು ಕಡ್ಡಾಯವಾಗಿ ತರಬೇಕು. (ಒಂದು ಸೆಟ್ ಮೂಲ ಪ್ರಮಾಣ ಪತ್ರಗಳು / ದಾಖಲೆಗಳು + ಒಂದು ಸೆಟ್ ಜೆರಾಕ್ಸ್ ಪ್ರತಿಗಳು)

**ವೇಳಾಪಟ್ಟಿ**

| DATE | Forenoon Session-1<br>9.30 a.m. – 11.00 a.m.<br>Reporting Time: 8.45 a.m. | | Forenoon Session-2<br>11.15 a.m. – 1.15 p.m.<br>Reporting Time: 10.45 a.m. | | Afternoon Session-1<br>2.00 pm onwards<br>Reporting Time: 1.30 p.m. | |
|---|---|---|---|---|---|---|
| | Engineering / Any Rank Numbers | | Engineering / Any Rank Numbers | | Engineering / Any Rank Numbers | |
| | From | To | From | To | From | To |
| 22-07-2023 | 1 | 25000 | 25001 | 50000 | 50001 | 75000 |
| 23-07-2023 | 75001 | 120000 | 120001 | 160000 | 160001 | Last Rank |

ಕಾರ್ಯನಿರ್ವಾಹಕ ನಿರ್ದೇಶಕರು

18ನೇ ಅಡ್ಡ ರಸ್ತೆ, ಸಂಪಿಗೆ ರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560 012
18th Cross, Sampige Road, Malleshwaram, Bengaluru - 560 012.
Phone: 080 - 23 564 583, 23 460 460, 23 361 786, Fax: 080 - 23 461 576
e-mail : keauthority-ka@nic.in Website : http://kea.kar.nic.in